ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	433
2.	ಸದಸ್ಯರ ಹೆಸರು	:	ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
3.	ಉತ್ತರಿಸುವ ದಿನಾಂಕ	:	04-02-2021
4.	ಉತ್ತರಿಸುವವರು	:	ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಯ ಎರಡು ಬದಿಯಲ್ಲಿ ಅಲ್ಲಲ್ಲಿ ತ್ಯಾಜ್ಯದ ರಾಶಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮನೆ ಮನೆಯಿಂದ ಕಸದ ಸಂಗ್ರಹಣೆ ಮತ್ತು ಸಾಕಾಣಿಕೆಯನ್ನು ಪ್ರತಿದಿನ ಪಾಲಿಕೆ ವತಿಯಿಂದ ಕೈಗೊಳ್ಳಲಾಗುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಹಲವಾರು ಪ್ರದೇಶಗಳಲ್ಲಿ ಜನರು ರಸ್ತೆಯ ಬದಿಗಳಲ್ಲಿ ರಾತ್ರಿ ವೇಳೆಯಲ್ಲಿ ತ್ಯಾಜ್ಯವನ್ನು ಸುರಿಯುತ್ತಿರುವುದರಿಂದ ನಗರದ ಅಂದಕ್ಕೆ ಧಕ್ಕೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ರೀತಿ ಸಾರ್ವಜನಿಕರು ತ್ಯಾಜ್ಯವನ್ನು ಸುರಿಯುತ್ತಿರುವ ಸುಮಾರು 2370 Black Spot ಗಳನ್ನು ಇಲ್ಲಿಯವರೆಗೂ ಪಾಲಿಕೆಯಿಂದ ಗುರುತಿಸಲಾಗಿರುತ್ತದೆ. ಈ ತರಹದ Black Spot ಗಳಲ್ಲಿ ತ್ಯಾಜ್ಯವನ್ನು ಸಾರ್ವಜನಿಕರು ಸುರಿಯುತ್ತಿರುವುದನ್ನು ತಡೆಗಟ್ಟಲು ಸ್ಥಳೀಯ RWA (Resident Welfare Association), NGOs ಹಾಗೂ ನಾಗರೀಕರ ಸಹಯೋಗವನ್ನು ಪಡೆದು ಬೆಂಗಳೂರು ನಗರವನ್ನು ಸುಂದರೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ ಹಾಗೂ ಸದರಿ ಸ್ಥಳಗಳಲ್ಲಿ ಮಾರ್ಷಲ್ಸ್‌ಗಳನ್ನು ನೇಮಿಸಿ, ರಸ್ತೆಯ ಬದಿಗಳಲ್ಲಿ ತ್ಯಾಜ್ಯವನ್ನು ಸುರಿಯುತ್ತಿರುವವರನ್ನು ಪತ್ತೆಹಚ್ಚಿ ದಂಡವನ್ನು ವಿಧಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಘನತ್ಯಾಜ್ಯ ನಿರ್ವಹಣೆ ಉಪ ನಿಯಮಗಳು (ಮಾರ್ಚ್ 2020) ಅನ್ನು ರಚಿಸಲಾಗಿದ್ದು, ಸದರಿ ಉಪನಿಯಮಗಳಲ್ಲಿ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದ ಹಾಗೂ ಉಪನಿಯಮಗಳನ್ನು ಪಾಲಿಸದ ಸಾರ್ವಜನಿರಿಗೆ ಕನಿಷ್ಠ ರೂ.1,000/- ಗಳಿಂದ ಗರಿಷ್ಠ ರೂ.2.00 ಲಕ್ಷಗಳವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.
ಆ	ಇದರಿಂದ ನಗರದ ಸಾರ್ವಜನಿಕರ ಆರೋಗ್ಯಕ್ಕೆ ಹಾನಿ ಉಂಟಾಗಿ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ	ಕೂಡಲೇ ಈ ತ್ಯಾಜ್ಯದ ರಾಶಿಯನ್ನು ತೆಗೆದು ಸ್ವಚ್ಛಗೊಳಿಸಿ ಪರಿಸರ ನೈರ್ಮಲ್ಯಕ್ಕೆ, ನಗರದ ಅಂದಕ್ಕೆ ಗಮನ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;	

ಪ್ರಸ್ತುತ, ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ 2020 ಅನ್ನು ರೂಪಿಸಲಾಗಿದ್ದು, ಸದರಿ ಅಧಿನಿಯಮದಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಉಪಬಂಧಗಳನ್ನು ಕಲ್ಪಿಸಲಾಗಿರುತ್ತದೆ.

294: ತರಬೇತಿ ಮತ್ತು ಸಾರ್ವಜನಿಕ ಜಾಗೃತಿ:

ಪಾಲಿಕೆಯು, ತನ್ನ ಸಿಬ್ಬಂದಿ, ಅನೌಪಚಾರಿಕ ಘನತ್ಯಾಜ್ಯ ಆರಿಸುವವರು / ಸಂಗ್ರಾಹಕರಿಗೆ ಘನತ್ಯಾಜ್ಯ ನಿರ್ವಹಣೆಯ ನಿಯಮಗಳು ಮತ್ತು ಈ ಅಧಿನಿಯಮದ ಅಡಿಯಲ್ಲಿ ಹೇಳಿರುವ ರೀತಿಯಲ್ಲಿ ವಿಂಗಡಿಸಿದ ವಿಧಾನದಲ್ಲಿ ಘನತ್ಯಾಜ್ಯವನ್ನು ಸಂಗ್ರಹಣೆ ಮತ್ತು ಸಾಗಣೆ ಮಾಡುವ ಕುರಿತು ಮತ್ತು ಅದನ್ನು ಸಂಸ್ಕರಣೆ ಮಾಡುವ ಕುರಿತು ಅರಿವು ಮೂಡಿಸಲು ತರಬೇತಿಯನ್ನು ಆಯೋಜಿಸತಕ್ಕದ್ದು.

295: ಪಾಲಿಕೆಯಿಂದ ತ್ಯಾಜ್ಯವನ್ನು ಕಡಿಮೆಗೊಳಿಸುವಿಕೆ:

ಪಾಲಿಕೆಯು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಪ್ರೋತ್ಸಾಹ ಧನಗಳನ್ನು ಒದಗಿಸುವುದರ ಮೂಲಕ ಅನಗತ್ಯ ಪ್ಯಾಕೇಜು ಪರಿಕರ ಬಳಸಿ ಬಿಸಾಡಬಹುದಾದ ಉತ್ಪನ್ನಗಳನ್ನು ಒಳಗೊಂಡಿರುವ ಉತ್ಪನ್ನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಗೆ ತಡೆಯೊಡ್ಡುವ ಮೂಲಕ ಘನತ್ಯಾಜ್ಯದ ಉತ್ಪತ್ತಿಯನ್ನು ಕನಿಷ್ಠ ಪ್ರಮಾಣಕ್ಕೆ ತರಲು ಮತ್ತು ಕಡಿಮೆ ಮಾಡಲು ಪ್ರಯತ್ನಿಸತಕ್ಕದ್ದು.

296: ತ್ಯಾಜ್ಯ ನಿರ್ವಹಣೆಯ ಉಲ್ಲಂಘನೆಗಾಗಿ ದಂಡನೆಗಳು:

1) ತ್ಯಾಜ್ಯ ನಿರ್ವಹಣೆಯ ನಿಯಮಗಳ ಅಥವಾ ಬೈಲಾಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಅಥವಾ ಅವುಗಳನ್ನು ಪಾಲಿಸಲು ವಿಫಲನಾದ ಯಾರೇ ವ್ಯಕ್ತಿಯು ಪಾಲಿಕೆಯ ಅಂತಹ ಅನ್ವಯವಾಗಬಹುದಾದ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ನಿರ್ಧರಿಸಲಾದ 2.00 ಲಕ್ಷ ರೂಪಾಯಿಗಳಿಗೆ ಮೀರದ ಜುಲ್ಮಾನೆಯೊಂದಿಗೆ ದಂಡನೆಗೆ ಗುರಿಪಡಿಸತಕ್ಕದ್ದು.

		2) ಪಾಲಿಕೆಯು ತ್ಯಾಜ್ಯ ನಿರ್ವಹಣೆ ಅಧಿನಿಯಮದ ಅನುಸಾರವಾಗಿ ಅಥವಾ ಈ ಉದ್ದೇಶಕ್ಕಾಗಿ ಮಾಡಲಾದ ಯಾವುದೇ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸಲು ವಿಫಲರಾಗುವ ನೌಕರರ ಮೇಲೆ ದಂಡನೆಗಳನ್ನು ವಿಧಿಸುವುದು, ಶಿಸ್ತು ಕ್ರಮ ಜಾರಿಗೊಳಿಸುವುದು ಒಳಗೊಂಡಂತೆ ಸೂಕ್ತ ಕ್ರಮವನ್ನು ಸಹ ಕೈಗೊಳ್ಳತಕ್ಕದ್ದು.
ಈ	ಸಿ.ಸಿ.ಕ್ಯಾಮರಗಳನ್ನು ಅಳವಡಿಸಿ ತ್ಯಾಜ್ಯವನ್ನು ಸುರಿಯುವವರನ್ನು ಪತ್ತೆ ಹಚ್ಚಿ ಅವರಿಗೆ ದಂಡ ವಿಧಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆ ಬದಿಯಲ್ಲಿ ತ್ಯಾಜ್ಯ ಸುರಿಯುವ Garbage Vulnerable Points (GVP) ಗಳನ್ನು ಗುರುತಿಸಲಾಗಿದ್ದು, ಈ ಸ್ಥಳಗಳನ್ನು ಕಸಮುಕ್ತಗೊಳಿಸಿ ಸುಂದರೀಕರಣಗೊಳಿಸಲು ಹಾಗೂ ಸದರಿ ಸ್ಥಳಗಳಲ್ಲಿ ನಿಗಾವಹಿಸಲು ಸಿ.ಸಿ.ಟಿ.ವಿ ಕ್ಯಾಮರಾ ಅಳವಡಿಸಲು "ಶುಭ್ರ ಬೆಂಗಳೂರು" ಯೋಜನೆ ಅಡಿಯಲ್ಲಿ ರೂ.8.00 ಕೋಟಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡಿದ್ದು, ಅದರಂತೆ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ನಅಇ 19 ಎಂಎನ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ